79 (75): ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ನೌಕರರು ಸೇವೆ ಸಲ್ಲಿಸಿರುತ್ತಿರುವಾಗ ಮೃತರಾದರೆ ಅವರ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ ನೀಡಲಾಗುತ್ತಿದೆಯೇ; ನೀಡದಿದ್ದರೆ ಕಾರಣಗಳೇನು?

ಆ) 2006 ಕ್ಕಿಂತ ಮುಂಚಿತವಾಗಿ ಖಾಲಿ ಇರುವ ಪದವಿಪೂರ್ವ ಕಾಲೇಜುಗಳಲ್ಲಿ ಬೋಧಕೇತರ ಸಿಬ್ಬಂದಿಯನ್ನು ಅನುಕಂಪದ ನೇಮಕಾತಿ ಸ್ಥಗಿತ ಗೊಳಿಸಲು ಕಾರಣವೇನು? (ವಿವರ ನೀಡುವುದು)

ಇ) ಸದರಿ ನೌಕರರ ಅವಲಂಬಿತರಿಗೆ ಕೌಟುಂಬಿಕ ಜೀವನ ನಿರ್ವಹಣೆಗೆ ಸರ್ಕಾರ ಯಾವ ಯಾವ ಭದ್ರತಾ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಖಾಸಗಿ ಆಡಳಿತ ಮಂಡಳಿಗಳ ಅಧೀನದಲ್ಲಿ ನಡೆಯುತ್ತಿರುವ ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಹುದ್ದೆಗಳು ಖಾಲಿ ಇದ್ದಲ್ಲಿ ಅನುಕಂಪದ ಆಧಾರದ ನೇಮಕಾತಿಗಳನ್ನು ಮಾಡಲಾಗುತ್ತಿದೆ. ಆದರೆ, ಹುದ್ದೆಗಳು 2006 ರ ಹೊಸ ಪ್ಯಾಟ್ರನ್ ಪ್ರಕಾರ ಲಭ್ಯವಿರುವ ಬೋಧಕೇತರ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ಮಾಡಲಾದ ನೇಮಕಾತಿಗಳಿಗೆ ಅನುಮೋದನೆ ಮಾಡಲಾಗುತ್ತದೆ.

ಆ) ಸರ್ಕಾರದ ಆದೇಶ ಸಂಖ್ಯೆ ಇಡಿ 136 ಟಿಪಿಯು 1999 ದಿನಾಂಕ: 09–10–2006ರಂತೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಇರಬೇಕಾದ ಸಿಬ್ಬಂದಿ ಮಾದರಿ ಜಾರಿಗೆ ಬಂದಿದೆ. ಅದರಂತೆ ಬೋಧಕೇತರ ಹುದ್ದೆಗಳನ್ನು ಪುನರ್ ನಿಗದಿಪಡಿಸಿ ಲಭ್ಯವಿರುವ ಬೋಧಕೇತರ ಖಾಲಿ ಹುದ್ದೆಗಳಿಗೆ ಅನುಕಂಪದ ನೇಮಕಾತಿ ಅನುಮೋದನೆಗೆ ಅವಕಾಶವಿದೆ.

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 138 ಟಿಪಿಯು 2009 ದಿನಾಂಕ: 6–1–2011 ರಲ್ಲಿ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ,

ನೋಂದಣಿ, ಆಡಳಿತ ಸಹಾಯಾನುದಾನ ಇತ್ಯಾದಿ) ನಿಯಮಗಳು 2006 ರ ನಿಯಮ 15ಕ್ಕೆ ತಿದ್ದುಪಡಿ ಮಾಡಿ, ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಬೋಧಕೇತರ ಖಾಲಿ ಹುದ್ದೆ ಲಭ್ಯವಿಲ್ಲದಿದ್ದಲ್ಲಿ ಬೇರೊಂದು ಅನುದಾನಿತ ಕಾಲೇಜಿನಲ್ಲಿ ಲಭ್ಯವಿರುವ ಬೋಧಕೇತರ ಖಾಲಿ ಹುದ್ದೆಗೆ ನೇಮಕಾತಿ ಅವಕಾಶ ಕಲ್ಪಿಸಲಾಗಿದೆ.

ಕಾಲೇಜು ಸ್ಥಾಪನೆಯ ಬಗ್ಗೆ

82 (298): ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವಕಲ್ಯಾಣ ಮತ ಕ್ಷೇತ್ರಕ್ಕೆ ಕಳೆದ ಶೈಕ್ಷಣಿಕ ವರ್ಷದಲ್ಲಿ ಎಷ್ಟು ಪದವಿ ಕಾಲೇಜುಗಳನ್ನು ಯಾವ ಯಾವ ಸ್ಥಳಗಳಿಗೆ ಮಂಜೂರು ಮಾಡಲಾಗಿದೆ;

ಆ) ಈ ಪೈಕಿ ಎಷ್ಟು ಪದವಿ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ಎಲ್ಲೆಲ್ಲಿ ನಿವೇಶನಗಳನ್ನು ತೆಗೆದುಕೊಳ್ಳಲಾಗಿದೆ;

ಇ) ಈ ಕ್ಷೇತ್ರಕ್ಕೆ ಮಂಜೂರಾಗಿರುವ ಪದವಿ ಕಾಲೇಜನ್ನು ನಿವೇಶನ ದೊರಕಿಲ್ಲವೆಂಬ ಕಾರಣ ನೀಡಿ ಬೇರೆ ಸ್ಥಳಕ್ಕೆ ವರ್ಗಾವಣೆ ಮಾಡಿರುವುದು ನಿಜವೇ? (ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಮೇಲ್ಕಂಡ ಪದವಿ ಕಾಲೇಜಿಗೆ ನಿವೇಶನಕ್ಕಾಗಿ ಈಗಾಗಲೇ ಸರ್ಕಾರಿ ಜಾಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಬಸವಕಲ್ಯಾಣಕ್ಕೆ ಮಂಜೂರಾಗಿರುವ ಪದವಿ ಕಾಲೇಜನ್ನು ಪ್ರಾರಂಭಿಸಲು ಇರುವ ತೊಂದರೆಗಳೇನು? (ವಿವರ ನೀಡುವುದು);

ಶ್ರೀ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು):

ಅ) ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು. ಸದರಿ ಕಾಲೇಜಿನ ಕಟ್ಟಡ ಕಾಮಗಾರಿಗೆ ನಿವೇಶನ ದೊರಕಿಲ್ಲದಿರುವುದರಿಂದ ನಬಾರ್ಡ್ ಹೈ-ಪವರ್ ಕಮಿಟಿ ಸಭೆಯಲ್ಲಿ